ಸೆಲೆಬ್ರಿಟಿ

■ ಹನಿ

## ಕಾರ್ಲ್ ಬರುತ್ತಾನೆ..

ಟ್ರ್ಯಾಕ್ ಅಂಡ್ ಫೀಲ್ಡ್‌ನಲ್ಲಿ ಕಾರ್ಲ್ ಲೂಯಿಸ್ ಇವತ್ತಿಗೂ ಬಹುದೊಡ್ಡ ದಂತಕಥೆ. 9 ಒಲಿಂಪಿಕ್ಸ್ ಗೋಲ್ಡ್‌ಮೆಡಲ್ ಮತ್ತು 8 ವಿಶ್ವ ಚಾಂಪಿಯನ್ ಟೂರ್ನಿಗಳ ಗೋಲ್ಡ್‌ಮೆಡಲ್‌ಗಳನ್ನು ಗೆದ್ದಾತ ದಂತಕಥೆಯಾಗದೆ ಇರಲು ಹೇಗೆ ಸಾಧ್ಯ? ಈ ದಂತಕಥೆ ಮೇ ಎರಡನೇ ವಾರದಲ್ಲಿ ಬೆಂಗಳೂರಿಗೆ ಬರಲಿದ್ದಾನೆ. ಇಲ್ಲಿ ನಡೆಯುವ ವಿಶ್ವಮಟ್ಟದ ಓಟದ ಸ್ಪರ್ಧೆಯಲ್ಲಿ ಸೌಹಾರ್ದ ರಾಯಭಾರಿಯಾಗಿ ಓಡಲಿದ್ದಾನೆ.



ಕಾರ್ಲ್ ಕುಟುಂಬಕ್ಕೆ ಕ್ರೀಡಾ ಹಿನ್ನೆಲೆ ಇತ್ತು. ಅಪ್ಪ ಅಮ್ಮ ಇಬ್ಬರೂ ಕ್ರೀಡೆ ಮತ್ತು ಇತರ ಕಲೆಗಳಲ್ಲಿ ಹೆಸರು ಮಾಡಿದವರೇ. ಕಾಲೇಜಿನಲ್ಲಿದ್ದಾಗಲೇ ನೈಕ್ ಕಂಪೆನಿಯ ಸ್ಪಾನ್ಸರ್ ಪಡೆದ ಆಗಲೇ ರಾಷ್ಟ್ರೀಯ ಕೂಟ ದಾಖಲೆ ಮಾಡಿದ್ದ. 100 ಮೀ., 200 ಮೀಟರ್, 400 ಮೀ. ರಿಲೇ, ಲಾಂಗ್ ಜಂಪ್– ಹೀಗೆ ಕಾರ್ಲ್ ಚಿನ್ನ ಗೆಲ್ಲದ ವಿಭಾಗವಿಲ್ಲ. 1980ರಲ್ಲೇ ಮಾಸ್ಕೊ ಒಲಿಂಪಿಕ್ಸ್‌ಗೆ ಕ್ವಾಲಿಫೈ ಆದರೂ, ಅಮೆರಿಕ ಬಹಿಷ್ಕಾರದಿಂದಾಗಿ ಅಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ 88ರ ಒಲಿಂಪಿಕ್ಸ್ ಬಳಿಕ ಕಾರ್ಲ್ ಜಮಾನಾ ಶುರುವಾಯಿತು. 1997ರಲ್ಲಿ ನಿವೃತ್ತಿ ಆಗುವವರೆಗೂ ಕಾರ್ಲ್ ಟ್ರ್ಯಾಕ್ ಅಂಡ್ ಫೀಲ್ಡ್‌ನ ಕಣ್ಮಣಿಯೇ ಆಗಿದ್ದ. ಈತನನ್ನು 100 ಮೀಟರ್ ಓಟದಲ್ಲಿ ಸೋಲಿಸಿ ಒಲಿಂಪಿಕ್ಸ್ ಚಿನ್ನ ಗೆದ್ದ ಬೆನ್ ಜಾನ್ಸನ್ ಬಳಿಕ ಉದ್ದೀಪನ ಮದ್ದು ಪ್ರಕರಣದಲ್ಲಿ ಸಿಕ್ಕು ಬಿದ್ದು ಚಿನ್ನ ಕಳೆದುಕೊಂಡ. ಪತ್ರಕರ್ತರ ಜತೆ ಸದಾ ಜಗಳಗಂಟನಾಗಿಯೇ ಇದ್ದ ಕಾರ್ಲ್, ಈಗ ವಿಶ್ವಸಂಸ್ಥೆಯ ಸದ್ಭಾವನಾ ರಾಯಭಾರಿ ಆಗಿರುವುದು ವಿಶೇಷ. ನಿವೃತ್ತಿಯ ಬಳಿಕ ಸಿನಿಮಾ, ಕಿರುತೆರೆಯಲ್ಲೂ ನಟಿಸಿ ಸೈ ಎನ್ನಿಸಿಕೊಂಡ ಕಾರ್ಲ್, ಒಂದು ಸಲ ನ್ಯೂಜೆರ್ಸಿ ಸೆನೆಟ್ ಚುನಾವಣೆಗೆ ನಿಂತರೂ, ನ್ಯೂಜೆರ್ಸಿಯಲ್ಲಿ 6 ವರ್ಷಗಳ ಕಾಲ ವಾಸಿಸಿಲ್ಲ ಎಂಬ ಕಾರಣಕ್ಕಾಗಿ ಸ್ಪರ್ಧೆಯಿಂದ ಅನರ್ಹಗೊಂಡಿದ್ದ. 'ಬೆಂಗಳೂರಿಗೆ ಬರಲು ಕಾತರನಾಗಿದ್ದೇನೆ' ಎಂದು ಹೇಳುವ ಮೂಲಕ ಇಲ್ಲಿನ ಕ್ರೀಡಾಭಿಮಾನಿಗಳಲ್ಲಿ ಕಾರ್ಲ್ ಉತ್ಸಾಹ ಮೂಡಿಸಿದ್ದಾನೆ. ●



## ಗಟ್ಟಿಗಿತ್ತಿ ಸುಚಿತ್ರಾ

ಸಾಮಾನ್ಯವಾಗಿ ದೊಡ್ಡವರು ಹಣ ಕಳೆದುಕೊಂಡರೆ ಸುಮ್ಮನಿರುವುದೇ ಹೆಚ್ಚು. ಕಳೆದುಕೊಂಡದ್ದರ ಬಗ್ಗೆ ಜನಸಾಮಾನ್ಯರು ಅನುಕಂಪ ತೋರಿಸುವು–ದಕ್ಕಿಂತ ಹೆಚ್ಚಾಗಿ, 'ಅವರಿಗೆಲ್ಲಿಂದ ಬಂತು ಅಷ್ಟೊಂದು ಹಣ?' ಎಂಬ ಕಟಕಿ ಸಹಜ. ಆದರೆ ಈ ಸುಚಿತ್ರಾ ಕೃಷ್ಣಮೂರ್ತಿ ಗಟ್ಟಿಗಿತ್ತಿ. ಎಚ್.ಎಸ್.ಬಿ.ಸಿ ಎಂಬ ದೈತ್ಯ ಬಹುರಾಷ್ಟ್ರೀಯ ಬ್ಯಾಂಕಿನಿಂದಲೇ ಕಟ್ಟಿದ ದುಡ್ಡನ್ನು ಲಾಭ ಸಮೇತ ವಸೂಲಿ ಮಾಡಿಕೊಂಡಿದ್ದಾಳೆ.

**ನಡೆದದ್ದಿಷ್ಟು:** ಸುಚಿತ್ರಾ ಎಚ್.ಎಸ್.ಬಿ.ಸಿ ಬ್ಯಾಂಕಿನಲ್ಲಿ 3.6 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದಾಳೆ. 'ನಮ್ಮನ್ನು ಫಂಡ್ ಮ್ಯಾನೇಜರ್ ಮಾಡಿದರೆ ನಿಮ್ಮ ಹಣವನ್ನು ಮ್ಯೂಚುವಲ್ ಫಂಡ್‌ನಲ್ಲಿ ಹೂಡಿ ಕೆಲವೇ ವರ್ಷಗಳಲ್ಲಿ 24 ಪರ್ಸೆಂಟ್‌ನಷ್ಟು ಅತ್ಯಧಿಕ ಲಾಭ ಕೊಡಿಸುತ್ತೇವೆ' ಎಂದು ಬ್ಯಾಂಕ್ ಭರವಸೆ ನೀಡಿತ್ತು. ಅದನ್ನು ನಂಬಿದ ಸುಚಿತ್ರಾ ನಿಶ್ಚಿಂತೆಯಿಂದ ಇದ್ದಳು. ಆದರೆ ನಾಲ್ಕು ವರ್ಷಗಳಲ್ಲಿ ಬ್ಯಾಂಕು ನಷ್ಟ ತೋರಿಸಿದ್ದೇ ಬಂತು. ಲಾಭ ಬಿಡಿ, ಹಾಕಿದ ಹಣಕ್ಕೂ ಕೊರತೆ ಆಯಿತು. ಬ್ಯಾಂಕಿನವರ ಜತೆ ಮಾತನಾಡಿದರೆ ಪ್ರಯೋಜನವಾಗಲಿಲ್ಲ. ಹೂಡಿಕೆ ಅಧಿಕಾರಿಗಳಿಗೆ ದೂರು ನೀಡಿದರೂ ಏನೂ ಆಗಲಿಲ್ಲ. ಸುಮ್ಮನಿರದ ಸುಚಿತ್ರಾ ಸೆಬಿಗೆ ದೂರು ನೀಡಿ ನಾಲ್ಕು ವರ್ಷ ಹೋರಾಟ ನಡೆಸಿದಳು. ವಕೀಲರಿಗೆ ಕೊಡಲು ದುಡ್ಡಿಲ್ಲ ಎಂದು ತಾನೇ ಓಡಾಡಿದಳು. ಕೊನೆಗೂ ಕಳೆದ ತಿಂಗಳು ಸೆಬಿ ತೀರ್ಪು ನೀಡಿ ಹೂಡಿದ ಹಣ ಮತ್ತು ಲಾಭದ ಹಣವನ್ನು ವಾಪಸ್ ಕೊಡಿಸಿದೆ.

ಚಿಕ್ಕಂದಿನಿಂದಲೇ ಸುಚಿತ್ರಾ ಧೈರ್ಯಗಾತಿ. ಶಾಲಾ ಬಾಲಕಿ ಆಗಿದ್ದಾಗ 'ಚುನೌತಿ' ಟಿವಿ ಸೀರಿಯಲ್‌ನಲ್ಲಿ ಅಭಿನಯ. 90ರ ದಶಕದಲ್ಲಿ ಯಶಸ್ವೀ ಮಾಡೆಲ್ ಆಗಿದ್ದ ಈಕೆ ಪಾಮೊಲಿವ್ ಸೋಪ್, ಕಾಲ್ಗೇಟ್ ಟೂತ್‌ಪೇಸ್ಟ್, ಲಿಮ್ಕಾ ಜ್ಯೂಸ್ ಮೂಲಕ ಜನಪ್ರಿಯಳಾದವಳು. ಆಗಾಗ್ಗೆ ಸಿನಿಮಾ, ಆಗಾಗ್ಗೆ ಟೀವಿ ಅಭಿನಯ ಎಂದು ಸುಖವಾಗಿದ್ದ ಸುಚಿತ್ರಾ, ಗಂಡ ಶೇಖರ್ ಕಪೂರ್‌ನಿಂದ ಬೇರೆಯಾದದ್ದೇಕೆ ಎನ್ನುವುದು ಈಗಲೂ ಗುಟ್ಟಿನ ಸಂಗತಿಯೇ. ಬಳಿಕ ಶಾಸ್ತ್ರೀಯ ಸಂಗೀತ ಕಲಿತಳು, ಯಶಸ್ವಿ ಪಾಪ್ ಗಾಯಕಿ ಆದಳು! ಜತೆಗೆ ಯಶಸ್ವಿ ಪೇಂಟರ್ ಕೂಡಾ! 'ದಿ ಸಮ್ಮರ್ ಆಫ್ ಕೂಲ್' ಎಂಬ ಇಂಗ್ಲಿಷ್ ಕಾದಂಬರಿ ಬರೆದು ಮಾರುಕಟ್ಟೆಯಲ್ಲಿ ಗೆದ್ದ ಬಳಿಕ, ಬರೆದ ಇನ್ನೆರಡು ಪುಸ್ತಕಗಳು ಯಶಸ್ವಿ ಲೇಖಕಿ ಎಂಬ ಕೀರ್ತಿ ತಂದಿತು. 'ರಾಂಗೋಪಾಲ್ ವರ್ಮಾನನ್ನು ಮದುವೆಯಾಗು ಎಂದು ದುಂಬಾಲು ಬಿದ್ದಿದ್ದೆ, ಅವನು ಒಪ್ಪಲಿಲ್ಲ' ಎಂದು ಬಿಂದಾಸ್ ಹೇಳಿಕೆ ನೀಡಿದ್ದ ಈಕೆ, ಆರ್ಗಾನಿಕ್ ಕ್ಯಾಂಡಲ್ ತಯಾರಿಕೆಯ ಕಂಪೆನಿ ಶುರು ಮಾಡಿ ಯಶಸ್ವೀ ಉದ್ಯಮಿ ಎಂದೂ ಹೆಸರು ಮಾಡಿದ್ದಾಳೆ. ಹೆಣ್ಣೊಬ್ಬಳು ಮನಸ್ಸು ಮಾಡಿದರೆ ಏನೆಲ್ಲಾ ಮಾಡಬಹುದು ಎನ್ನುವುದಕ್ಕೆ ಸುಚಿತ್ರಾ ಸಾಕ್ಷಿ. ●

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65